# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು–572 103 ☎:0816–2255650,2273511 ಫ್ಯಾಕ್ಸ್:0816–2270719


**ಸಂಖ್ಯೆ:ತುವಿ:ಪವಿ:2025-26/ 68** **ದಿನಾಂಕ:23.04.2025**

**NEP/Non NEP**

## : ಅಧಿಸೂಚನೆ :

**ವಿಷಯ** : 2025 ರ ಜನವರಿ–ಮಾರ್ಚ್ ಮಾಹೆಗಳಲ್ಲಿ ನಡೆದ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ನಿರ್ವಹಿಸಲ್ಪಟ್ಟ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ ಉತ್ತರ ಪತ್ರಿಕೆಗಳ ಛಾಯಾ ಪ್ರತಿ /ಮರುಮೌಲ್ಯಮಾಪನದ ಮಾಹಿತಿ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025 ರ ಜನವರಿ–ಮಾರ್ಚ್ ಮಾಹೆಗಳಲ್ಲಿ ನಡೆದ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ನಿರ್ವಹಿಸಲ್ಪಟ್ಟ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಈಗಾಗಲೇ ಪ್ರಕಟಿಸಲಾಗಿದ್ದು, ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಳನ್ನು ಪಡೆಯಲು ಮತ್ತು ಮರುಮೌಲ್ಯಮಾಪನಕ್ಕೆ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸಲು ದಿನಾಂಕಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

<table>
<tr><th rowspan="2">ಕ್ರಮ ಸಂಖ್ಯೆ</th><th rowspan="2">ಕೋರ್ಸ್</th><th>ಸ್ಕೀಮ್– UG NEP 2021</th><th>ಸ್ಕೀಮ್– UG NEP 2022</th><th>ಸ್ಕೀಮ್– UG SEP 2024 [REVISED NEP]</th><th>UG Non NEP</th></tr>
<tr><th>ಸೆಮಿಸ್ಟರ್</th><th>ಸೆಮಿಸ್ಟರ್</th><th>ಸೆಮಿಸ್ಟರ್</th><th>ಸೆಮಿಸ್ಟರ್</th></tr>
<tr><td>1</td><td>ಬಿ.ಎ.</td><td rowspan="7">I(ಪೂರಕ), III(ಪೂರಕ) & V(ಪೂರಕ)</td><td rowspan="8">I(ನವೀನ & ಪೂರಕ), III(ನವೀನ & ಪೂರಕ) ಹಾಗೂ V(ನವೀನ)</td><td rowspan="11">I(ನವೀನ)</td><td rowspan="11">----</td></tr>
<tr><td>2</td><td>ಬಿ.ಬಿ.ಎ.</td></tr>
<tr><td>3</td><td>ಬಿ.ಕಾಂ.</td></tr>
<tr><td>4</td><td>ಬಿ.ಸಿ.ಎ.</td></tr>
<tr><td>5</td><td>ಬಿ.ಎಸ್ಸಿ.</td></tr>
<tr><td>6</td><td>ಬಿ.ಎಸ್.ಡಬ್ಲ್ಯೂ</td></tr>
<tr><td>7</td><td>ಬಿ.ಎಸ್ಸಿ.(FAD)</td></tr>
<tr><td>8</td><td>ಬಿ.ವಿ.ಎ.</td><td>----</td></tr>
<tr><td>9</td><td>ಬಿ.ಎಸ್ಸಿ.(ಫೈರ್ ಅಂಡ್ ಇಂಡಸ್ಟ್ರಿಯಲ್ ಸೇಫ್ಟಿ)</td><td>----</td><td>I(ನವೀನ & ಪೂರಕ) ಹಾಗೂ III(ನವೀನ)</td></tr>
<tr><td>10</td><td>ಬಿ.ಎಸ್ಸಿ.(Data Science)</td><td>----</td><td>----</td></tr>
<tr><td>11</td><td>ಬಿ.ಕಾಂ.[(B.F.S.I.-Banking Financial Services and Insurance (AEDP)]</td><td>----</td><td>----</td></tr>
<tr><td>12</td><td>ಬಿ.ವೋಕ್</td><td>----</td><td>----</td><td>----</td><td>I (ನವೀನ & ಪೂರಕ) ಹಾಗೂ III (ನವೀನ & ಪೂರಕ)</td></tr>
</table>

**ವಿಶೇಷ ಸೂಚನೆ:** ಈಗಾಗಲೇ ಪ್ರಕಟಿಸಲಾಗಿರುವ ಫಲಿತಾಂಶದಲ್ಲಿ ಏನಾದರೂ ಸಮಸ್ಯೆಗಳು ಕಂಡುಬಂದಿದ್ದಲ್ಲಿ ತಕ್ಷಣವೇ ಪರೀಕ್ಷಾ ವಿಭಾಗವನ್ನು ಸಂಪರ್ಕಿಸಿ ಫಲಿತಾಂಶ ಸರಿಪಡಿಸಿಕೊಂಡು ನಿಗದಿತ ದಿನಾಂಕದೊಳಗೆ ಛಾಯಾ ಪ್ರತಿ/ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

| | | |
|---|---|---|
| 1. | ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 29.04.2025 |
| 2. | ಅಂತಿಮ ದಿನಾಂಕದ ನಂತರ ವಿದ್ಯಾರ್ಥಿಗಳು ತಮ್ಮ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಲಾಗಿನ್ ಮೂಲಕ ಛಾಯಾಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. | |
| 3. | ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 10.05.2025 ರಿಂದ 15.05.2025 |
| 4. | ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ನಂತರ ಅಂದೇ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿಗೆ ತಮ್ಮ ಅರ್ಜಿಯ ಮಾಹಿತಿಯನ್ನು ಸಲ್ಲಿಸತಕ್ಕದ್ದು.<br>**ವಿ.ಸೂ.:** ಕಾಲೇಜಿನ ಪ್ರಾಂಶುಪಾಲರು ಅಗತ್ಯ ಮಾಹಿತಿಗಳೊಂದಿಗೆ ಕ್ರೂಢೀಕರಿಸಿ, ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಮಾನ್ಯ ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಲು ಕಡೆಯ ದಿನಾಂಕ | 17.05.2025 |

**ಛಾಯಾಪ್ರತಿ ಮತ್ತು ಮರುಮೌಲ್ಯಮಾಪನದ ಶುಲ್ಕವನ್ನು ಯು.ಯು.ಸಿ.ಎಂ.ಎಸ್. ನಲ್ಲೇ ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಲು ಸೂಚಿಸಲಾಗಿದೆ.**

**ಶುಲ್ಕಗಳ ವಿವರ:**

1. Photo copy for one subject : Rs. 210-00
2. Revaluation for one Subject : Rs. 260-00

**ಸೂಚನೆ :**

1. ವಿದ್ಯಾರ್ಥಿಗಳು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವಷ್ಟೇ ಉತ್ತರ ಪುಸ್ತಕಗಳ ಛಾಯಾ ಪ್ರತಿ ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.
2. ಉತ್ತರ ಪುಸ್ತಕಗಳ ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಉತ್ತರ ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಯು.ಯು.ಸಿ.ಎಂ.ಎಸ್. ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವುದರಿಂದ, ಸಂಬಂಧಪಟ್ಟ ವಿದ್ಯಾರ್ಥಿಗಳು ಸದರಿ ಉತ್ತರ ಪುಸ್ತಕಗಳ ಛಾಯಾ ಪ್ರತಿಗಳನ್ನು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವೇ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಯಾವುದೇ ಭೌತಿಕ ಪ್ರತಿಗಳನ್ನು ವಿತರಿಸಲಾಗುವುದಿಲ್ಲ.

## ಮರುಮೌಲ್ಯಮಾಪನದ ಮಾನದಂಡಗಳು :–

1. ಮೊದಲನೇ ಮೌಲ್ಯಮಾಪನ ಹಾಗೂ ಮರುಮೌಲ್ಯಮಾಪನದಲ್ಲಿ ನೀಡಲ್ಪಟ್ಟ ಅಂಕಗಳ ವ್ಯತ್ಯಾಸ ಶೇಕಡ 15 ಕ್ಕಿಂತ ಕಡಿಮೆ ಇದ್ದಲ್ಲಿ, ಅವೆರಡರಲ್ಲಿನ ನಡುವೆ ಅತಿ ಹೆಚ್ಚು ಅಂಕಗಳನ್ನು ಅಂತಿಮಗೊಳಿಸಲಾಗುವುದು.
2. ಒಂದೊಮ್ಮೆ ವ್ಯತ್ಯಾಸ ಶೇಕಡ 15 ಹಾಗೂ ಅದಕ್ಕಿಂತ ಹೆಚ್ಚಿದ್ದಲ್ಲಿ ತೃತೀಯ ಮೌಲ್ಯಮಾಪನವಾಗುತ್ತದೆ. ಮೂರೂ ಮೌಲ್ಯಮಾಪನಗಳ ಪೈಕಿ ನಿಕಟವಾಗಿರುವ ಎರಡು ಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಅಂತಿಮಗೊಳಿಸಲಾಗುವುದು.
3. ಒಂದೊಮ್ಮೆ ಮೂರು ಮೌಲ್ಯಮಾಪನಗಳಲ್ಲಿ ನೀಡಲಾದ ಅಂಕಗಳ ಪೈಕಿ ಯಾವುದಾದರೂ ಒಂದು ಮೌಲ್ಯಮಾಪನ ಅಂಕ ಉಳಿದೆರಡು ಮೌಲ್ಯಮಾಪನ ಅಂಕಗಳಿಂದ ಸಮಾನಾಂತರ ನಡುವಿನಲ್ಲಿದ್ದರೆ ಅಂತಹ ಸಂದರ್ಭದಲ್ಲಿ ಮೂರು ಅಂಕಗಳ ಪೈಕಿ ಹೆಚ್ಚು ಅಂಕಗಳಿರುವ ಎರಡು ಅಂಕಗಳ ಸರಾಸರಿ ತೆಗೆದು, ಸದರಿ ಅಂಕವನ್ನು ಅಂತಿಮಗೊಳಿಸಲಾಗುವುದು.

ಮೇಲ್ಕಂಡ ಮಾನದಂಡಗಳನ್ವಯ ಮರುಮೌಲ್ಯಮಾಪನವನ್ನು ಮಾಡಲಾಗುವುದು. ಹೀಗಿರುವಾಗ ಕೆಲವು ಸಂದರ್ಭಗಳಲ್ಲಿ ಮರುಮೌಲ್ಯಮಾಪನದ ನಂತರ ವಿದ್ಯಾರ್ಥಿಗಳ ಅಂಕಗಳು ಹೆಚ್ಚಾಗಲೂಬಹುದು ಅಥವಾ ಕಡಿಮೆಯೂ ಆಗುವ ಸಾಧ್ಯತೆಯಿರುತ್ತದೆ ಎಂಬ ಅಂಶವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಕಡ್ಡಾಯವಾಗಿ ತರುವುದು.

23/4/21

**ಕುಲಸಚಿವರು(ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರು, ಘಟಕ/ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ನೋಡಲ್ ಅಧಿಕಾರಿಗಳು, ಘಟಕ / ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರತಿಗಳು :**

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. **ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.**
5. ವಿಭಾಗದ ಮೇಲ್ವಿಚಾರಕರು, ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಕಛೇರಿ ಪ್ರತಿ.